ಮೈಸೂರ ಗೆಜೆಟ್ಟು.

ಸಂ. 42.] ಸರ್ಕಾರದಿಂದ ಪ್ರಾಮಿಸ್ ತ್ರದ್ದು. [ನಂ. 25.

ಬೆಂಗಳೂರು, ಗುರುವಾರ, ಜೂನ್ ತಾ॥ 20, ಸನ್ 1907.

II ನೆ ಭಾಗ

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖೆ.

ಪ್ರಕಟನೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟ್ ಮೂಡಗೆರೆ ತಾಲ್ಲೂಕು ಬಾಳೂರು ಜಂಗಲಿಯನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟ್ ರೆಗ್ಯುಲೇಷನ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ 31ನೆ ಮೇ ತಾರೀಖಿನ ಇಸ್ತಿಹಾರು 1907ನೆ ಇಸವಿ ಜೂನ್ 13ನೆ ತಾರೀಖಿನ ಮೈಸೂರು ಗೆಜೆಟ್ಟಿನ ಕನ್ನಡ 2ನೆ ಭಾಗದ 274—275—276ನೆ ಪೇಜಿನಲ್ಲಿ ತಪ್ಪಾಗಿ ವಿವರಿಸಲ್ಪಟ್ಟಿದೆ.

ಕಡೂರು ಡಿಸ್ಟ್ರಿಕ್ಟ್ ಕೊಪ್ಪ ತಾಲ್ಲೂಕು ನರಸಿಂಹ ಪರ್ವತವೆಂಬ ರಿಸರ್ವಿನಲ್ಲಿ ಅಡಗಿರುವ ಪ್ರದೇಶವನ್ನು ಮನ್ನಾ ಜಂಗಲಿಯಾಗಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟ್ ರೆಗ್ಯುಲೇಷನ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ 31ನೆ ಮೇ ತಾರೀಖಿನ ಇಸ್ತಿಹಾರ್, 1907ನೆ ಇಸವಿ ಜೂನ್ 13ನೆ ತಾರೀಖಿನ ಮೈಸೂರು ಗೆಜೆಟ್ಟಿನ 2ನೆ ಭಾಗದ ಕನ್ನಡ ಗೆಜೆಟ್ಟಿನ 277-278—279ನೆ ಪೇಜಿನಲ್ಲಿ ತಪ್ಪಾಗಿ ವಿವರಿಸಲ್ಪಟ್ಟಿದೆ. ಇದಕ್ಕೆ ಎಲ್ಲರೂ ಗಮನ ಕೊಡಬೇಕು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕಡೂರು ಡಿಸ್ಟ್ರಿಕ್ಟ್ ತುಂಗಭದ್ರಾ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟ್ ರೆಗ್ಯುಲೇಷನ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ ಜೂನ್ 1ನೆ ತಾರೀಖಿನ ಇಸ್ತಿಹಾರು 1907ನೆ ಇಸವಿ ಜೂನ್ 13ನೆ ತಾರೀಖು ಮೈಸೂರು ಗೆಜೆಟ್ಟಿನ ಕನ್ನಡ 2ನೆ ಭಾಗದ 279—280-281—282—283ನೆ ಪೇಜಿನಲ್ಲಿ ತಪ್ಪಾಗಿ ವಿವರಿಸಲ್ಪಟ್ಟಿರುತ್ತೆ.

ಎಂ. ಶಾಮರಾವ್,
ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರ್.

ಇಸ್ತಿಹಾರ್.

ಕೋಲಾರ್ ಡಿಸ್ಟ್ರಿಕ್ಟಿನ ತಂಗೇಡಿ ಮತ್ತು ಕಕ್ಕೆ ಚಕ್ಕೆಯನ್ನು 1907—08ನೆ ಸಾಲಿನಲ್ಲಿ ರೂಢಿಸಿಕೊಳ್ಳತಕ್ಕ ವಿಚಾರದಲ್ಲಿ 1907ನೆ ಜೂನ್ ಮಾಹೆ 13ನೆ ಮರ್ತ್ತುಮಿನ 4ನೆ ನಂಬರ್ ಮೈಸೂರು ಗೆಜೆಟ್ II‌ನೆ ಭಾಗದ 283—284ನೆ ಪುಟದಲ್ಲಿ ಪ್ರಾಯಿಸಿ ಆಗಿರುವ 1907ನೆ ಜೂನ್ 1ನೆ ತಾರೀಖಿನ ಇಸ್ತಿಹಾರ್ ನೋಡತಕ್ಕದ್ದು.

ಕೋಲಾರ್ ಡಿಸ್ಟ್ರಿಕ್ಟ್ ಬವರಿಂಗ್‌ಪೇಟೆ ತಾಲ್ಲೂಕು ಕಾವಸಂದ್ರದ ಸ್ಟೇಟ್ ಫಾರೆಸ್ಟಿನ ಸಾಧೆ ಬಿಳರಿ ವಿಚಾರದಲ್ಲಿ 1907ನೆ ಜೂನ್ ಮಾಹೆ 13ನೆ ಮರ್ತ್ತುಮಿನ 24ನೆ ನಂಬರ್ ಮೈಸೂರ್ ಗೆಜೆಟ್ II‌ನೆ ಭಾಗದ 284—285—286ನೆ ಪುಟದಲ್ಲಿ ಪ್ರಾಯಿಸ್ಡ್ ಆಗಿರುವ 1907ನೆ ಇಸವಿ ಜೂನ್ 1ನೆ ತಾರೀಖಿನ ನೋಟಿಫಿಕೇಷನ್ ನೋಡತಕ್ಕದ್ದು.

ವೈ. ಸೀತಾರಾಮೈಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.